ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆ ಬಗ್ಗೆ ಅಲ್ಲ. ನನಗೆ ಬಂದಿರುವಂತಹ ಸಮಸ್ಯೆಗೆ ತಾವು ರಕ್ಷಣೆಗೆ ಬರಬೇಕು ಎನ್ನುವ ದೃಷ್ಟಿಯಿಂದ ಕೇಳುತ್ತಿದ್ದೇನೆ. ಸನ್ಮಾನ್ಯ ಜಯರಾಮ ಶೆ[illegible]ದಾಖಲಾತಿ ಸಮೇತ ನಿಮಗೆ ಕೊಟ್ಟರೆ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ[illegible]. ನಾನು ಈ ಪ್ರಶ್ನೆ ದಾಖಲಾತಿ ಸಮೇತ ಒಬ್ಬ ವೈದ್ಯರ ಬಗ್ಗೆ. ದಾಖಲಾತಿಗಳನ್ನು ತಿದ್ದಿದ್ದಾರೋ. ಟೆಂಡೆನ್ಸ ತಿದ್ದಿದ್ದಾರೋ? ತಿದ್ದಿದ್ದಾರೆ. ಅವರು ರಜಕ್ಕೆ ಅರ್ಜ. ಹಾಕಿದ್ದಾರಾ? ಅರ್ಜ ಮೂರು ಮು[illegible]ತಿಂಗಳು ಹಾಕಿಯೇ ಇಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಇಷ್ಟೆಲ್ಲಾ ಆಗಿ[illegible]ದು ಹೌದು. ಇನ್ನು ಮುಂದೆ ಈ ರೀತಿ ಮಾಡಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಉತ್ತರ ಒ[illegible]ದೆ. ರೈಟಿಂಗನಲ್ಲಿ ಉತ್ತರ ಬಂದಿದೆ. ಈ ರೀತಿ ಆಗದೇ ಇರುವ ಹಾಗೆ ತಾವೇನಾದರೂ ನಮ್ಮ ರಕ್ಷಣೆ[illegible] ಬರುತ್ತೀರೋ ಎಂದು ನಾನು ನಿಮಗೆ ಪ್ರಶ್ನೆ ಕೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು : ಎಲ್ಲೆಲ್ಲಿ ರಕ್ಷಣೆಗೆ ಬರಲು ಸಾಧ್ಯವಾಗುತ್ತದೆ ಅಲ್ಲೆಲ್ಲಾ ನಾನು ಇದ್ದೇನಲ್ಲ! ನಾನೇ ನಿಮಗೆ ರಕ್ಷಣೆ, ನನಗೆ ನೀವು ರಕ್ಷಣೆ.

ತೀರ್ಥಹಳ್ಳಿ ನಗರಕ್ಕೆ ನೀರು ಸರಬರಾಜು ಮಂಡಳಿಯಿಂದ ಪೂರೈಕೆಯಾದ ಮೋಟಾರನ್ನು ಅಳವಡಿಸಲು ವಿಳಂಬ.

63 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ನಗರಕ್ಕೆ ನೀರು ಸರಬರಾಜು ಮಾಡುವ 60 ಅಶ್ವಶಕ್ತಿಯ ಮೋಟಾರು ಕೊಂಡಕೊಳ್ಳುವ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ಬರ ಕಾಮಗಾರಿ ಹಣದಲ್ಲಿ ಶಿವಮೊಗ್ಗದಲ್ಲಿ ಮತ್ತು ಒಳಚರಂಡಿ ಮಂಡಳಿಯವರಿಗೆ ಹಣ ಬಿಡುಗಡೆ ಮಾಡಿದ್ದು ಯಾವಾಗ?

ಆ) ಈ ಬಗ್ಗೆ ಶಿವ[illegible]ಗ್ಗ ನಗರ ನೀರು ಸರಬರಾಜು ಮಂಡಳಿಯವರು ಮೋಟಾರು ಕೊಂಡು ತೀರ್ಥಹ[illegible], ತಂದಿಟ್ಟು ಎಷ್ಟು ಸಮಯವಾಗಿದೆ.

ಇ) ಯಾ[illegible]ರಣಕ್ಕಾಗಿ ಇದನ್ನು ಜೋಡಿಸಲು ವಿಳಂಬವಾಗಿದೆ?

ಈ) ಇದನ್ನು ಯಾವಾಗ ಜೋಡಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ತೀರ್ಥಹಳ್ಳಿ ನಗರಕ್ಕೆ ನೀರು ಮಾಡಲು 60 ಅಶ್ವ ಶಕ್ತಿಯ ಮೋಟಾರು ಕೊಳ್ಳಲು ಶಿವಮೊಗ್ಗ ಜಿಲ್ಲಾಧಿಕಾರಿಗಳು ಬರಕಾಮಗಾರಿ ಹಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ಏಪ್ರಿಲ್ 95ರಲ್ಲಿ ಹಣ ಬಿಡುಗಡೆ ಮಾಡಿರುತ್ತಾರೆ.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಸೂಕ್ತ

ಸಾಮರ್ಥ್ಯದ ಮೋಟಾರನ್ನು ಸರಬರಾಜು ಮಾಡಲು ಟೆಂಡರು ಕರೆದು ತೀರ್ಮಾನವಾದ ಮೇಲೆ, ಈ ಮೋಟಾರು ಈಗಾಗಲೇ ಖರೀದಿಸಲಾಗಿದ್ದು2 ತಿಂಗಳ ಹಿಂದೆ ತೀರ್ಥಹಳ್ಳಿಯಲ್ಲಿ ತಂದಿಡಲಾಗಿದೆ.

ಇ) ಮೋಟಾರಿಗೆ ಜೋಡಿಸಲು ಬೇಕಾದ ಸಲಕರಣೆಗಳನ್ನು ಒದಗಿಸಲು ಗುತ್ತಿಗೆದಾರರಿಂದ ವಿಳಂಬವಾಯಿತು.

ಈ) ಈ ಮೋಟಾರನ್ನು ಜೋಡಿಸುವ ಕೆಲಸ ಪ್ರಾರಂಭವಾಗಿದ್ದು, ಇನ್ನೂ ಎರಡು ವಾರದೊಳಗೆ ಚಾಲು ಮಾಡಲಾಗುವುದು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ತೀರ್ಥಹಳ್ಳಿ ನಗರದ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದೆ. ಈಗ ಉತ್ತರದಲ್ಲಿ ಏಪ್ರಿಲ್ 95ರಲ್ಲಿ ಅಲ್ಲಿನ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಕಡೆಯ ಉತ್ತರವನ್ನು ಓದಿಕೊಳ್ಳಿ 'ಈ' ಮೋಟಾರನ್ನು ಜೋಡಿಸುವ ಕೆಲಸ ಪ್ರಾರಂಭವಾಗಿದ್ದು ಇನ್ನು ಎರಡು ವಾರದೊಳಗೆ ಚಾಲೂ ಮಾಡಲಾಗುವುದು ಎಂದು ಇದೆ. ಕ್ಯಾಟಗಾರಿಕಲ್ ಕಮಿಟಮೆಂಟ್ ಹೌಸನಲ್ಲಿದೆ ಇನ್ನುಏನು ಇದೆ?

ಶ್ರೀ ಅರಗ ಜ್ಞಾನೇಂದ್ರ : ನಾನು ಹೇಳುತ್ತಿದ್ದೇನೆ. ಒಂದು ಮೋಟಾರ್ ಕೊಳ್ಳುವುದಕ್ಕೆ ದುಡ್ಡು ಕೊಟ್ಟು ಒಂದು ವರ್ಷವಾಯಿತು. ನಾನು ಏಕೆ ಹೇಳುತ್ತಿದ್ದೇನೆಂದರೆ ತುಂಗಾ ನದಿ ದಡದ ಮೇಲೆ ಇರುವುದು ತೀರ್ಥಹಳ್ಳಿಪಟ್ಟಣ. ತುಂಗಾ ನದಿಯಲ್ಲಿ ನೀರು ಹರಿಯುತ್ತಿದೆ. ಕುಡಿಯುವ ನೀರಿಗೆ ಅಲ್ಲಿನ ಜನ ಕಣ್ಣೀರು ಹಾಕುತ್ತಿದ್ದಾರೆ. ಸ್ಟ್ಯಾಂಡ್ ಬೈ ಮೋಟಾರಿಗೋಸ್ಕರ. ಈಗ 15 ದಿವಸದ ಹಿಂದೆ ಮೋಟರ್ ಕೆಟ್ಟು ಹೋಯಿತು ಮಾನ್ಯ ಮಂತ್ರಿಗಳೇ. ಒಂದೇ ಮೋಟಾರ್ ಇರುವಂತಹದು. ಕೆಟ್ಟು ಹೋದರೆ, ರಾವಾಟರನ್ನು ತಂದು ಟ್ಯಾಂಕನಲ್ಲಿ ನೀರು ಹೊಡೆದು ಅಲ್ಲಿನ ಜನರಿಗೆ ಆ ರಾವಾಟರ್ ಕೊಡುತ್ತಿದ್ದಾರೆ ಇಂತಹ ಒಂದು ದುಸ್ಥಿತಿ ಇದೆ. ಒಂದು ವರ್ಷದಿಂದ ಮೋಟಾರಗೆ ದುಡ್ಡು ಕೊಟ್ಟು ಹಳೆಯ ಮೋಟಾರ್ ತಂದಿಟ್ಟಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಫಿಕ್ಸ ಮಾಡಿದರೆ ಅವರ ಮರ್ಯಾದೆ ಹೋಗುತ್ತದೆ ಎನ್ನುರ ಕಾರಣಕ್ಕಾಗಿ ತಂದಿಟ್ಟಿದ್ದಾರೆ. ಇಲಾಖೆಯವರು ಮತ್ತು ಅಲ್ಲಿರತಕ್ಕ ಕಂಟ್ರಾಕ್ಟರ್ ಸೇರಿ ಭ್ರಷ್ಟಾಚಾರ ಮಾಡಿ ಹಳೆಯ ಮೋಟಾರ್ ತಂದಿಟ್ಟಿದ್ದಾರೆ.

ಅಧ್ಯಕ್ಷರು : ಹೊಸ ಮೋಟಾರ್ ಕಳುಹಿಸಿ. ಹಳೆಯದಕ್ಕೆ ಪೇಂಟ್ ಹೊಡೆದರೆ ಅದು ಹೊಸದಾಗುತ್ತದೆ.

ಶ್ರೀ ವೈಜನಾಥ್ ಪಾಟೀಲ್ : ಹಣವನ್ನು ಡೆಪ್ಯೂಟಿ ಕಮೀಷನರ್ ಅವರು ಏಪ್ರಿಲ್‌ನಲ್ಲಿ ರಿಲೀಸ್ ಮಾಡಿದರೂ ಕೆಲವು ಕಾರಣದಿಂದ ತಡ ಆಗಿದೆ. ಟೆಂಡರ್ ಮತ್ತೊಂದುರಿಂದಾಗಿ ತಡವಾಗಿದೆ. ಈಗ ಎರಡು ತಿಂಗಳ ಮೊದಲೇ ಖರೀದಿ ಮಾಡಿರುತ್ತಾರೆ, ಕಮೀಷನ್ ಮಾಡುತ್ತಾರೆ. ಎರಡು ವಾರದಲ್ಲಿ ಆ ಕೆಲಸ ಆಗುತ್ತದೆ. ಒಂದು ವೇಳೆ ತಾವು ಹೇಳಿದ ಹಾಗೆ ಕಂಟ್ರಾಕ್ಟರ್ ಮತ್ತು ನಮ್ಮ ಆಫಿಷಿಯಲ್ ಅವ್ಯವಹಾರ ಮಾಡಿದ್ದಾರೆಂಬ ನಿರ್ದಿಷ್ಟ ಪ್ರಕರಣ ತಾವು ತಂದರೆ ಬರೋಬರಿ ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಾಕು ಬಿಡಿ, ಅವರ ಮೇಲೆ ಉಪ ಪ್ರಶ್ನೆ ಬೇಡ.

ಶ್ರೀ ಅರಗ ಜ್ಞಾನೇಂದ್ರ : ನೀರಿನ ಅಭಾವ ಇದೆ. ಒಂದು ವರ್ಷದಿಂದ ಕೆಲಸಮಾಡದೇ ಇದ್ದವರು ಯಾವಾಗ ಮಾಡುತ್ತಾರೆ. ನಾನು ಮೊನ್ನೆ ಹೋಗಿದ್ದೇನೆ ಊರಿಗೆ, ನಿನ್ನೆ ಬೆಳಿಗ್ಗೆ ಟೆಲಿಫೋನ್ ಮಾಡಿದ್ದೇನೆ. ಯಾವಾಗ ಪ್ರಾರಂಭ ಮಾಡುತ್ತಾರೆ?

ಅಧ್ಯಕ್ಷರು : ಅದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಇನ್ನು ಎರಡು ವಾರದಲ್ಲಿ ಚಾಲು ಮಾಡುತ್ತೇವೆಂದು ಹೇಳಿದ್ದಾರೆ. ನೀರು ಸಿಗುತ್ತೋ ಇಲ್ಲವೋ ನೋಡಿ. ನೀವೂ ಪಾರ್ಲಿಮೆಂಟ್ ಚುನಾವಣೆಯೆಲ್ಲಾ ಮುಗಿಸಿ ಬರುತ್ತೀರಲ್ಲಾ ಆವಾಗ ಹೇಳಿ ಕ್ರಮ ತೆಗೆದುಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ : ನಾನು ಲೋಕಸಭಾ ಎಲೆಕ್ಷನ್‌ಗೆ ಹೋಗುವ ಹಾಗೆ ಇಲ್ಲ. ಮುಗಿಸುವುದು ಹೇಗೆ? ನಾನು ನಿಮ್ಮ ಜೊತೆಯೇ ಇರಬೇಕಾಗುತ್ತದೆ.

ಅಧ್ಯಕ್ಷರು : ಹಾಗೆಲ್ಲಾ ಹೇಳಿದರೆ ನಿಮ್ಮ ನಾಯಕರು ಆಮೇಲೆ ನಮ್ಮ ಮೇಲೆ ಕೋಪ ಮಾಡಿಕೊಳ್ಳಬಹುದು.

ಶಿಗ್ಗಾಂವ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ.

95 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರದಾ ನದಿಯಿಂದ ಕುಡಿಯುವ ನೀರಿನ ಯೋಜನೆ ಎಂದು ಮಂಜೂರಾಯಿತು?

ಆ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕಾಮಗಾರಿಗಳು ಯಾವುವು?

ಇ) ಈ ಯೋಜನೆಯಲ್ಲಿ ಬಂಕಾಪುರ ಗ್ರಾಮವನ್ನು ಕೈಬಿಡಲಾಗಿದೆಯೇ ಹಾಗಿದ್ದಲ್ಲಿ ಅದನ್ನು ಕೂಡ ಸದರಿ ಯೋಜನೆಯಡಿಯಲ್ಲಿ ಸೇರಿಸಲಾಗುವುದೇ?

ಈ) ಸದರಿ ಯೋಜನೆಗೆ ಸಂಬಂಧಿಸಿದ ಜಲ ವಿದ್ಯುತಗಾರ ಹಾಗೂ ಪೈಪಲೈನಗಳ ಕೆಲಸ ಕೂಡಲೇ ಪ್ರಾರಂಭಿಸಲಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 9.10.91ರಲ್ಲಿ ಮಂಜೂರಾಗಿದೆ.

ಆ) ಬೇಸಿಗೆ ಅವಧಿ ಜಲಶೇಖರಣೆಯ ಕೆರೆಯ ಸಾಮರ್ಥ್ಯ ಹೆಚ್ಚಿಸುವ ಮತ್ತು ಕೆರೆಯನ್ನು ಬಲಪಡಿಸುವ ಕೆಲಸವನ್ನು ಪೂರ್ತಿ ಮಾಡಲಾಗಿದೆ.

ಇ) ಈ ಯೋಜನೆಯಲ್ಲಿ ಬಂಕಾಪುರ ಗ್ರಾಮವನ್ನು ಕೈಬಿಡಬೇಕೆಂದು ತೀರ್ಮಾನಿಸಲಾಗಿತ್ತು.